ಕರ್ನಾಟಕ ಸರ್ಕಾರ

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಮ್‌ಎಫ್‌ಸಿ ನ್ಯಾಯಾಲಯ, ದೇವನಹಳ್ಳಿ**

**ಸಿಸಿ ನಂ. 3396/2017**

| | |
|---|---|
| ಹೆಸರು | ಃ ಅಂಜನ ಮೂರ್ತಿ |
| ತಂದೆಯ ಹೆಸರು | ಃ ಲಕ್ಷ್ಮಯ್ಯ |
| ವಯಸ್ಸು | ಃ 35 |
| ಉದ್ಯೋಗ | ಃ ಅಬಕಾರಿ ನೀರಿಕ್ಷಕರು, ಬೆಂಗಳೂರು ನಗರ |
| ವಾಸ | ಃ ಬೆಂಗಳೂರು. |

CW-10, PW-5

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ. 19.10.2023**

**ಮುಖ್ಯ ವಿಚಾರಣೆ ಃ ಎಪಿಪಿಯವರಿಂದಃ**

ನಾನು ದಿಃ08.02.2017 ರಿಂದ ದಿಃ09.08.2017 ರವರೆಗೆ ಹೊಸಕೋಟೆ ಅಬಕಾರಿ ವಿಭಾಗದಲ್ಲಿ, ಹೆಚ್ಚುವರಿ ಪ್ರಭಾರ ಅಬಕಾರಿ ಉಪ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 03.04.2017 ರಂದು ಈ ಪ್ರಕರಣದ ಕಡತವನ್ನು ಚಾಸಾ-9 ರವರಿಂದ ಪಡೆದುಕೊಂಡಿರುತ್ತೇನೆ. ದಿಃ10.05.2017 ರಂದು ಚಾಸಾ-4 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ದಿಃ12.05.2017 ರಂದು ಚಾಸಾ-2 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ದಿಃ18.05.2017 ರಂದು ಆರೋಪಿಗೆ ನೋಟಿಸ್ ನೀಡಿ ತನಿಖೆಗೆ ಹಾಜರು ಆಗುವಂತೆ ತಿಳಿಸಿರುತ್ತೇನೆ. ದಿಃ19.05.2017 ರಂದು ಚಾಸಾ-5 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ದಿಃ28.06.2017 ರಂದು ಚಾಸಾ-8 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ದಿಃ01.08.2017 ರಂದು ತನಿಖೆಯು ಮುಕ್ತಾಯವಾಗಿದ್ದು ಸಾಕಷ್ಟು ಸಾಕ್ಷದಾರಗಳಿದ್ದ ಕಾರಣ ಆರೋಪಿಗಳ ವಿರುದ್ದ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

**ಪಾಟೀ ಸವಾಲು ಶ್ರೀ.**ಎ ವೈ ಎ **ಆರೋಪಿ ಪರ ವಕೀಲರಿಂದ**

1. ಸ್ವಾದೀನ ಪಡಿಸಿದ 42 ಮಧ್ಯದ ಬಾಟಲಿಗಳನ್ನು ರಾಸಾಯಿನಿಕ ತನಿಖೆಗೆ ಕಳುಹಿಸಿರುವುದಿಲ್ಲ ಎಂದರೆ ಸರಿ. ಅಂತಿಮ ವರದಿಯಲ್ಲಿ ರಾಸಾಯಿನಿಕ ವಿಶ್ಲೇಷಣಗೆ ಮಧ್ಯದ ವಿವರಣೆಯನ್ನು ತಿಳಿಸಿರುತ್ತೇನೆ. ಅಬಕಾರಿ ಕಚೇರಿಯಿಂದ ನ್ಯಾಯಾಲಯಕ್ಕೆ 1 ಕಿ ಮಿ ಅಂತರ ಇದೆ ಎಂದರೆ ಸರಿ. ನಿಗದಿತ ಸಾಮರ್ಥ್ಯಕ್ಕಿಂತ ಹೆಚ್ಚಿನ ಮಧ್ಯವನ್ನು ಸ್ವಾದೀನ ಪಡಿಸಿದಾಗ ಪ್ರಮಾಣ ಪತ್ರ ನೀಡಬೇಕಾಗಿದ್ದು, ಅದನ್ನು ಈ ಪ್ರಕರಣದಲ್ಲಿ ನೀಡಿರುವುದಿಲ್ಲ ಎಂದರೆ ಸರಿ. ಆರೋಪಿಗೆ

ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆ ಪಡೆಯದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳಕ್ಕೆ ಹೋಗುವ ಮೊದಲು ಪ್ರ ವ ವರದಿ ದಾಖಲು ಆಗಿತ್ತೋ ಇಲ್ಲವೊ ಎಂದು ತಿಳಿದುಕೊಂಡಿರುವುದಿಲ್ಲ ಎಂದರೆ ಸರಿ. ಚಾಸಾ-೪ ರವರಿಂದ ವಾಹನಕ್ಕೆ ಸಂಬಂದಪಟ್ಟ ನೊಂದಣಿ ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಠಾಣ ಅಂಕೆ ಶಂಕೆಗಾಗಿ ಈ ಪ್ರಕರಣ ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ.

**(ಮರು ವಿಚಾರಣೆ ಇಲ್ಲ)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ.**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ದೇವನಹಳ್ಳಿ.**

ಕರ್ನಾಟಕ ಸರ್ಕಾರ

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಮ್‌ಎಫ್‌ಸಿ ನ್ಯಾಯಾಲಯ, ದೇವನಹಳ್ಳಿ**

**ಸಿಸಿ ನಂ. 3396/2017**

| | |
|---|---|
| ಹೆಸರು | ಃ ರಾಘವೇಂದ್ರ ಪಿ ಜಿ |
| ತಂದೆಯ ಹೆಸರು | ಃ ಗೋಪಾಲಯ್ಯ |
| ವಯಸ್ಸು | ಃ 42 |
| ಉದ್ಯೋಗ | ಃ ಅಬಕಾರಿ ನೀರಿಕ್ಷಕರು, ಕೆಂಗೇರಿ ವಲಯ |
| ವಾಸ | ಃ ಕೆಂಗೇರಿ. |

CW-9, PW-4

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ. 19.10.2023**

**ಮುಖ್ಯ ವಿಚಾರಣೆ ಃ ಎಪಿಪಿಯವರಿಂದಃ**

ನಾನು ದಿಃ15.02.2017 ರಿಂದ ದಿಃ04.03.2017 ರವರೆಗೆ ಹೊಸಕೋಟೆ ಅಬಕಾರಿ ವಿಭಾಗದಲ್ಲಿ, ಹೆಚ್ಚುವರಿ ಪ್ರಭಾರ ಅಬಕಾರಿ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 15.07.2017 ರಂದು ಈ ಪ್ರಕರಣದ ಕಡತವನ್ನು ರಮೇಶ್ ಅಬಕಾರಿ ನಿರೀಕ್ಷಕರಿಂದ ಪಡೆದುಕೊಂಡಿರುತ್ತೇನೆ. ದಿಃ17.02.2017 ರಂದು ಚಾಸಾ-1 ರವರು ಸ್ವಾದೀನ ಪಡಿಸಿದ್ದ ವಾಹನದ ವಿವರಣೆಯ ಬಗ್ಗೆ ವ್ಯವಸ್ಥಾಪಕರು, ಸುರಭಿ ಮೋಟಾರ್, ಶೋ ರೂಂ ಮತ್ತು ಸರ್ವೀಸ್, ದೇವನಹಳ್ಳಿ ರವರಿಗೆ ಪತ್ರ ವ್ಯವಹಾರ ಮಾಡಿರುತ್ತೇನೆ. ಸದರಿ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಅದೇ ದಿನ ಸದರಿ ಸಂಸ್ಥೆಯಿಂದ ವಾಹನದ ದಾಖಲಾತಿಗಳನ್ನು ತೆಗೆದುಕೊಂಡು ಕಡತಕ್ಕೆ ಅಳವಡಿಸಿರುತ್ತೇನೆ. ನಾನು ಪಡೆದುಕೊಂಡ ಸೇಲ್ ಸರ್ಟಿಫಿಕೇಟ್ ನ್ನು ನಿಪಿ-6 ಎಂದು, ಇನ್ ವಾಯ್ಸ್ ನ್ನು ನಿಪಿ-7 ಎಂದು, ವಿಮಾ ಪತ್ರವನ್ನು ನಿಪಿ-8 ಎಂದು ಗುರುತಿಸಲಾಯಿತು. ನಂತರ ಮುಂದಿನ ತನಿಖೆಯನ್ನು ಚಾಸಾ-10 ರವರಿಗೆ ಹಸ್ತಾಂತರಿಸಿರುತ್ತೇನೆ.

**ಪಾಟೀ ಸವಾಲು ಶ್ರೀ.**ಎ ವೈ ಎ **ಆರೋಪಿ ಪರ ವಕೀಲರಿಂದ**

1. ವಾಹನದ ಮಾಲಿಕತ್ವದ ಬಗ್ಗೆ ನೊಂದಣಿ ದಾಖಲೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿ. ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-5 ರಿಂದ 8 ಸೃಷ್ಟಿಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ.

**(ಮರು ವಿಚಾರಣೆ ಇಲ್ಲ)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ.**

ಪ್ರಧಾನ **ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ದೇವನಹಳ್ಳಿ.**

ಕರ್ನಾಟಕ ಸರ್ಕಾರ

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಮ್‌ಎಫ್‌ಸಿ ನ್ಯಾಯಾಲಯ, ದೇವನಹಳ್ಳಿ**

**ಸಿಸಿ ನಂ. 3396/2017**

ಹೆಸರು : ಶ್ರೀಮತಿ.ಎಸ್.ಎಮ್ ಪಾಟೀಲ್

ತಂದೆಯ ಹೆಸರು : ಮಲ್ಲನ ಗೌಡ

ವಯಸ್ಸು : 52

ಉದ್ಯೋಗ : ಅಬಕಾರಿ ನೀರಿಕ್ಷಕರು

ವಾಸ : ದೊಡ್ಡಬಳ್ಳಾಪುರ.

CW-1, PW-2

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ. 21.12.2023**

**ಮುಖ್ಯ ವಿಚಾರಣೆ : ಎಪಿಪಿಯವರಿಂದ:**

ನಾನು 2015 ರಿಂದ 2019 ರವರೆಗೆ ಅಬಕಾರಿ ಕಚೇರಿ, ದೇವನಹಳ್ಳಿ ಯಲ್ಲಿ ಅಬಕಾರಿ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ:16.09.2016 ರಂದು ಬೂದಿಗೆರೆ ಯಲ್ಲಿ ರಸ್ತೆಗಸ್ತು ಮಾಡುತ್ತಿದ್ದಾಗ, ಸಂಜೆ ಸುಮಾರು 07.000 ಗಂಟೆಗೆ ಬಂದ ಖಚಿತ ಮಾಹಿತಿ ಏನೆಂದರೆ ಬೂದಿಗೆರೆಯಿಂದ ಗ್ರಾಮದಿಂದ ದೇವನಹಳ್ಳಿಗೆ ಹೋಗುವ ರಸ್ತೆ ಮಾರ್ಗದಲ್ಲಿ ಅಕ್ರಮವಾಗಿ ಮದ್ಯ ಸಾಗಾಟ ಮಾಡುತ್ತಿದ್ದಾರೆ ಎಂದು ಬಂದಿದ್ದು, ನಾನು ತಕ್ಷಣ ಇಲಾಖ ವಾಹನದಲ್ಲಿ ಚಾಸಾ-2 ಮತ್ತು 3 ರವರ ಜೊತೆ, ಭಟ್ರಮಾರೇನಹಳ್ಳಿ ಬಳಿ ಬಂದು ರಸ್ತೆ ಗಾವಲು ನೆಡೆಸುತ್ತಿರುವಾಗ ಸುಮಾರು 10 ನಿಮಷ ದ ನಂತರ ಒಂದು ದ್ವಿ ಚಕ್ರ ವಾಹನದಲ್ಲಿ ಒಬ್ಬ ಸವಾರನು ವಾಹನವನ್ನು ವೇಗವಾಗಿ ಚಲಾಯಿಸಿಕೊಂಡು ಗಮನಿಸಿ, ತಕ್ಷಣ ವಾಹನವನ್ನು ನಿಲ್ಲಿಸಲು ನಮ್ಮ ಸಿಬ್ಬಂದಿ ಸೂಚನ ನೀಡಿದಾಗ ಸದರಿ ವಾಹನ ಚಾಲಕನು ವೇಗವಾಗಿ ಹೋಗಿದ್ದು, ಬಟ್ರಮಾರನಹಳ್ಳಿ ರಸ್ತೆಯ ದಿಬ್ಬಕ್ಕೆ ಹೊಡೆದು ವಾಹನವನ್ನು ಕೆಡವಿ ಓಡಿಹೋಗಿರುತ್ತಾನೆ. ಆತನನ್ನು ಹಿಡಿಯಲು ನಾನು ಮತ್ತು ಚಾಸಾ-3 ರವರು ಪ್ರಯತ್ನ ಮಾಡಿದ್ದು, ಆತನು ಸಿಕ್ಕಿರುವುದಿಲ್ಲ. ನಂತರ ವಾಹನದ ಬಳಿ ಬಂದು ನಾನು ತಪಾಸಣೆ ಮಾಡಲು ನ್ಯಾಯಾಲದಿಂದ ಶೋಧನಾ ವಾರೆಂಟ್ ಪಡೆಯಲು ಕಾಲವಾಕಾಶ ಇಲ್ಲದೆ ಇರುವ ಕಾರಣ ಸ್ಥಳದಲ್ಲಿ ಶೋದನ ಮೆಮೊ ತಯಾರು ಮಾಡಿರುತ್ತೇನೆ. ನಂತರ ಚೀಲವನ್ನು ತೆಗೆದು ನೋಡಲಾಗಿ ಒಂದು ರೊಟ್ಟಿನ ಪೆಟ್ಟಿಗೆಯಲ್ಲಿ 180 ಎಂ.ಎಲ್ ನ 6 ಓಲ್ಡ್ ಟವರ್ ನ ವಿಸ್ಕಿ, 180 ಎಂ.ಎಲ್ ನ 42 ಯುವರ್ ಚಾಯ್ಸ್ ಎಂಬ ಮದ್ಯದ ಟೆಟ್ರ ಪ್ಯಾಕ್ ಗಳು ಇರುವುದು ಕಂಡು ಬಂದಿರುತ್ತದೆ. ನಂತರ ವಾಹನವನ್ನು ಪರೀಶಿಲಿಸಿದಾಗ ಅದು ಹೊಸ ವಾಹನವಾಗಿದ್ದು ನೀಲಿ ಬಣ್ಣದಿಂದ ಕೂಡಿದ್ದು ಯಾವುದೇ ಸಂಖ್ಯೆ ಇರುವುದಿಲ್ಲ. ದೊರೆತ ಮದ್ಯದ ಪೈಕಿ 6 ಓಲ್ಡ್ ಟವರ್ ವಿಸ್ಕಿ, 30 ಬಾಟಲ್ ಯುವರ್ ಚಾಯ್ಸ ಬಾಟಲ್ ಗಳನ್ನು ರಸಾಯಿನಿಕ ಪರೀಕ್ಷೆಗೆ ಪ್ರತ್ಯೇಕಿಸಿ ಬಟ್ಟೆಯಿಂದ ಸುತ್ತಿ ದಾರ ಕಟ್ಟಿ ಇಲಾಖ ಸೀಲು ಹಾಕಲಾಯಿತು. ನಂತರ ಸ್ಥಳದಲ್ಲಿ ಅವುಗಳನ್ನು ಮಹಜರ್ ಬರೆಯುವ ಮುಖಾಂತರ ಸ್ವಾಧೀನ ಪಡಿಸಿಕೊಂಡಿರುತ್ತೇನೆ. ನಂತರ ಠಾಣೆಗೆ ವಾಪಸ್ಸು ಆಗಿ ಸರ್ಕಾರದ ಪರವಾಗಿ ದೂರು ಸಲ್ಲಿಸಿ ಪ್ರ.ವ

ವರದಿಯನ್ನು ದಾಖಲು ಮಾಡಿರುತ್ತೇನೆ. ನಂತರ ಮುಂದಿನ ತನಿಖೆಯನ್ನು ಚಾಸಾ-7 ರವರಿಗೆ ಹಸ್ತಾಂತರಿಸುತ್ತೇನೆ. ನಾನು ಸ್ಥಳದಲ್ಲಿ ತಯಾರಿಸಿದ ಮಹಜರ್ ಈಗಾಗಲೇ ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಶೋಧನಾ ಮೆಮೊವನ್ನು ನೋಡುತ್ತಿದ್ದು ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2 ಎ ಎಂದು, ಪ್ರ.ವ ವರದಿಯನ್ನು ನೋಡುತ್ತಿದ್ದು ಅದನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3 ಎ ಎಂದು, ರಾಸಾಯಿನಿಕ ಪರೀಕ್ಷೆಗೆ ತೆಗೆದ 30 ಬಾಟಲ್, 6 ಟೆಟ್ರಾ ಪ್ಯಾಕ್ ಗಳನ್ನು ಈಗಾಗಲೇ ಮು.ಮಾ-1 ರಿಂದ 36 ಎಂದು ಗುರುತಿಸಲಾಗಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿರುತ್ತಾರೆ. ಮಾದರಿ ಸೀಲ್ ನ್ನು ನೋಡುತ್ತಿದ್ದು ಅದನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು, ಓಡಿ ಹೋದ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ. ಆತನು ಈ ದಿನ ನ್ಯಾಯಾಲಯದ ಮುಂದಿರುವ ವ್ಯಕ್ತಿ ಆಗಿರುತ್ತಾನೆ.

**ಪಾಟೀ ಸವಾಲು ಶ್ರೀ.ಎವ್ಮೆಎ ಆರೋಪಿ ಪರ ವಕೀಲರಿಂದ**

1. ನನಗೆ ಮಾಹಿತಿ ಬಂದಾಗ ಬೂದಿಗೆರೆ ರಸ್ತೆಯಲ್ಲಿ ರಸ್ತೆಗಾವಲು ಮಾಡುತ್ತಿದ್ದೆ. ಘಟನಾ ಸ್ಥಳಕ್ಕೆ ಸಂಜೆ 07.10 ಗಂಟೆಗೆ ಹೋಗಿರುತ್ತೇನೆ. ಬೂದಿಗೆರೆ ಮತ್ತು ದೇವನಹಳ್ಳಿ ರಸ್ತೆ ಜನ ಸಾಂದತೆ ಇರುವ ರಸ್ತೆ ಎಂದರೆ ಸರಿಯಲ್ಲ. ದೇವನಹಳ್ಳಿ ಯಿಂದ ಬೂದಿಗರೆಗೆ ಬಸ್ ಸಂಪರ್ಕ ಇದೆ ಎಂದರೆ ಸಾಕ್ಷಿ ನಾನು ಇದ್ದಗ ಯಾವುದೇ ಬಸ್ ಬಂದಿಲ್ಲ ಎಂದು ನುಡಿಯತ್ತಾರೆ. ಅದೇ ರೀತಿ ಕೆಆರ್ ಪುರಂ ಮಾರ್ಗವಾಗಿ ಬಸ್ ಬರುತ್ತದೆ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಅಮಾನತು ಮಾಡುವಾಗ 8-10 ಜನ ಇದ್ದರು. ಆ ರೀತಿ ಸದರಿ ವ್ಯಕ್ತಿಗಳನ್ನು ಕೇಳಿದಾಗ ಹೇಳಿಕೆ ನೀಡಲು ನಿರಾಕರಿಸಿರುತ್ತಾರೆ. ಆದರೆ ಮೌಕಿಕವಾಗಿ ಹೇಳಿರುತ್ತಾರೆ. ಸದರಿ ವ್ಯಕ್ತಿಗಳು ಯಾವ ಊರಿನವರು ಎಂದು ಹೇಳಿರುವುದಿಲ್ಲ. ಚಾಸಾ-4 ರವರು ದೇವನಹಳ್ಳಿಯವರು ಎಂದರೆಸ ರಿ. ಚಾಸಾ-5 ರವರು ಬೈರಸಂದ್ರ ಗ್ರಾಮದವರು ಎಂದರೆ ಸರಿ. ಬೈರಸಂದ್ರ ಗ್ರಾವುದಿಂದ ಘಟನಾ ಸ್ಥಳಕ್ಕೆ 15 ಕಿ.ಮಿ ಅಂತರ ಇದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಚಾಸಾ-4 ಮತ್ತು 5 ರವರು ಮೌಕಿಕವಾಗಿ ಹೇಳಿರುವುದನ್ನು ಒಪ್ಪಿಕೊಂಡಿರುತ್ತಾರೆ. ಆದರೆ ಲಿಖಿತ ನೋಟಿಸ್ ನೀಡಿರುವುದಿಲ್ಲ. ನಿಪಿ-3 ನ್ನು ಕಚೇರಿಗೆ ಬಂದು ಸಿದ್ದಪಿಪಡಿಸಿರುತ್ತೇನೆ ಅದರ ಸಮಯ ನೆನಪಿರುವುದಿಲ್ಲ. ನಿಪಿ-1 ನ್ನು ರಾತ್ರಿ 08.00-09.15 ರವರೆಗೆ ಮಾಡಿರುತ್ತೇನೆ. ನಿಪಿ-1 ರಲ್ಲಿ ತಿಳಿಸಿರುವ ಸ್ಕೂಟರ್ ನ್ನು ನಾವು ಅಮಾನತು ಪಡಿಸಿರುವುದಿಲ್ಲ ಆದರೆ ಪಲ್ಸರ್ ವಾಹನವನ್ನು ಅಮಾನತು ಪಡಿಸಿರುತ್ತೇನೆ.

2. ಸಮಾನ್ಯವಾಗಿ ಮಹಜರ್ ಮಾಡುವಾಗ ಸ್ಥಳದಲ್ಲಿದ್ದ ವಸ್ತುಕಗಳನ್ನು ನೋಡಿ ಬರುಯುತ್ತೇವೆ ಎಂದರೆ ಸರಿ. ಸ್ಥಳದಲ್ಲಿ ನಾವು ಸ್ಕೂಟರ್ ನ್ನು ನಾವು ಅಮಾನತು ಪಡಿಸದೇ ಇದ್ದರೂ ನಿಪಿ-1 ರಲ್ಲಿ ಅಮಾನುತು ಪಡಿಸಿರುವುದಾಗಿ ಉಲ್ಲೇಖ ಇದೆ ಎಂರದೆ ಸರಿಯಲ್ಲ. ನಾವು ಘಟನಾ ಸ್ಥಳದಲ್ಲಿ ನಿಪಿ-1 ನ್ನು ಮಾಡದೇ ಇದ್ದರು ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೊರೆತ ಮದ್ಯದ ಪೈಕಿ 36 ಟೆಟ್ರಾ ಪ್ಯಾಕ್ ಗಳನ್ನು ರಾಸಾಯಿನಿಕ ಪರೀಕ್ಷೆಗೆ ತೆಗೆದಿರುತ್ತೇವೆ. ಆ ವಿಚಾರವನ್ನು ನಿಪಿ-1 ಮತ್ತು 3 ರಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ಕ್ಕೆ ಭಟ್ರಮಾರೇನಹಳ್ಳಿ ಗ್ರಾಮದ ಸಹಿ ಇರುವುದಿಲ್ಲ ಎಂದರೆ ಸಾಕ್ಷಿ ಯಾರು ಒಪ್ಪಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-1 ರ ಕಚ್ಚಾ ನಕ್ಷೆಯಲ್ಲಿ ವಾಹನ ಇದ್ದ ಸ್ಥಳ ಮತ್ತು ದೊರೆತ ಮದ್ಯದ ಬಗ್ಗೆ ಉಲ್ಲೇಖ ಇರುವುದಿಲ್ಲ ಎಂದರೆ ಸರಿಯಲ್ಲ.

3. ನಾವು ಅಮಾನತು ಪಡಸಿದ ರಟ್ಟಿನ ಬಾಕ್ಸ್ ಮತ್ತು ಚೀಲವನ್ನು ಹಾಜರು ಪಡಿಸಿರುತ್ತೇನೆ. ಸದರಿ ಚೀಲವನ್ನು ತನಿಖಾಧಿಕಾರಿಗಳಿಗೆ ಹಸ್ತಾಂತರಿಸಿರುತ್ತೇನೆ. ಚಾಸಾ-3 ಮತ್ತು 4 ರವರ ಸಹಿಗಳನ್ನು ಮು.ಮಾ ಗಳಲ್ಲಿ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ದಾಳಿ ಮಾಡಿರುವುದಿಲ್ಲ ಹಾಗೂ ಮು.ಮಾಗಳನ್ನು ವಶಪಡೆಸಿಕುಂಡಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಕಚೇರಿಯಿಂದ ನ್ಯಾಯಾಲಯಕ್ಕೆ 1 ಕಿ.ಮಿ ಅಂತರ ಇರುತ್ತದೆ. ನ್ಯಾಯಾಲಯದಿಂದ ಶೋಧನಾ

ವಾರೆಂಟ್ ಪಡೆಯಲು ನಾನು ಘಟನಾ ಸ್ಥಳದಲ್ಲಿದ್ದ ಕಾರಣ ಸಾಧ್ಯವಾಗಿರುವುದಿಲ್ಲ. ಘಟನಾ ಸ್ಥಳದಿಂದು 10 ರಿಂದ 15 ಮೀಟರ್ ದೂರದಲ್ಲಿ ಎಟಿಎಮ್ ಇದೆ ಎಂದರೆ ಸರಿ. ಸದರಿ ಎಟಿಎಮ್ ಗೆ ಗ್ರಾಮಸ್ತರು ಹೋಗಿ ಬಂದು ಮಾಡುತ್ತಾರೆ ಎಂದರೆ ಸರಿಯಲ್ಲ. ನಿಪಿ-1 ರಿಂದ 4 ನ್ನು ಕಚೇರಿಯಲ್ಲಿ ತಯಾರಿಸಿ ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-4 ಮತ್ತು 5 ರವರು ನಮ್ಮ ಕಚೇರಿಯ ಸಹಾಯಕರು ಎಂದರೆ ಸರಿಯಲ್ಲ. ಸದರಿಯವರನ್ನು ಈ ಕೇಸಿಗಾಗಿ ಸೃಷ್ಟಿಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿ ಅಕ್ರಮ ವುಧ್ಯವನ್ನು ಸಾಗಾಟ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಮಾದರಿ ಸಿಲು ತೆಗೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಠಾಣ ಅಂಕೆ ಶಂಕೆಗಾಗಿ ಈ ಪ್ರಕರಣ ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿಯ ಮೇಲೆ ಈ ಹಿಂದೆ ಯಾವುದೇ ಪ್ರಕರಣ ದಾಖಲಾಗಿರುವುದಿಲ್ಲ. ಆರೋಪಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಮರು ವಿಚಾರಣೆ ಇಲ್ಲ)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ.**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ದೇವನಹಳ್ಳಿ.**

ಕರ್ನಾಟಕ ಸರ್ಕಾರ

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಮ್ಎಫ್‌ಸಿ ನ್ಯಾಯಾಲಯ, ದೇವನಹಳ್ಳಿ**

**ಸಿಸಿ ನಂ. 3396/2017**

ಹೆಸರು ಃ ಸುಬ್ರಮಣಿ

ತಂದೆಯ ಹೆಸರು ಃ ಕರಗಪ್ಪ

ವಯಸ್ಸು ಃ 41

ಉದ್ಯೋಗ ಃ ಚಾಲಕ

ವಾಸ ಃ ಬೈರಸಂದ್ರ.

CW-5, PW-3

**<u>ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ. 21.12.2023</u>**

**<u>ಮುಖ್ಯ ವಿಚಾರಣೆ ಃ ಎಪಿಪಿಯವರಿಂದಃ</u>**

ಆರೋಪಿಯನ್ನು ನಾನು ನೋಡಿರುವುದಿಲ್ಲ. ಚಾಸಾ-4 ರವರು ಪರಿಚಯ ಇರುವುದಿಲ್ಲ. ಸಾಕ್ಷಿಗೆ ನಿಪಿ-1 ಮತ್ತು 4 ನ್ನು ತೋರಿಸಲಾಗಿ ಸಾಕ್ಷಿಯ ಸಹಿಯನ್ನು ನಿಪಿ-1(ಸಿ) ಮತ್ತು ನಿಪಿ-4(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಅಬಕಾರಿ ನೀರಿಕ್ಷಕರು ಕೇಳಿದ ಮೇರೆಗೆ ಸಹಿ ಮಾಡಿರುತ್ತೇನೆ ಯಾವ ವಿಚಾರಕ್ಕೆ ಎಂದು ಗೊತ್ತಿರುವುದಿಲ್ಲ. ನಮ್ಮ ಮುಂದೆ ಯಾವುದೇ ವಸ್ತುಗಳನ್ನು ಸ್ವಾದೀನ ಪಡಿಸಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ವಿನಂತಿಸಿದ್ದು, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

<u>**ಪಾಟೀ ಸವಾಲು**ಃ ಮಾನ್ಯ ಎಪಿಪಿ ರವರಿಂದಃ</u>

1. ದಿಃ16.09.2016 ರಂದು ಚಾಸಾ-1 ರವರು ನನ್ನನ್ನು ಮತ್ತು ಚಾಸ-4 ರವರನ್ನು ದಾಳಿಗೆ ಬರಬೇಕೆಂದು ಕೋರಿದ್ದರು ಎಂದರೆ ಸರಿಯಲ್ಲ. ಈ ಸಂಬಂದ ಚಾಸಾ-1 ರಿಂದ 3 ರವರ ಭಟ್ರಮಾರೇನಹಳ್ಳಿ ಬಳಿ ರಾತ್ರಿ 07.000 ಗಂಟೆ ಸುಮಾರಿಗೆ ರಸ್ತೆಗಾವಲು ಮಾಡುತ್ತಿರುವಾಗ ಆರೋಪಿಯು ತನ್ನ ದ್ವಿ ಚಕ್ರ ವಾಹನದಲ್ಲಿ ಮದ್ಯವನ್ನು ಒಂದು ಪ್ಲಾಸ್ಟಿಕ್ ಚೀಲದಲ್ಲಿ ಇಟ್ಟುಕೊಂಡು ಬರುತ್ತಿದ್ದರು ಎಂದರೆ ಸರಿಯಲ್ಲ. ಆಗ ಚಾಸಾ-1 ರವರು ಕೈ ಸನ್ನೆ ಮಾಡಿ ನಿಲ್ಲಿಸಿದಾಗ

ಆರೋಪಿತನು ತನ್ನ ವಾಹನವನ್ನು ಅಲ್ಲೇ ಬಿಟ್ಟು ಓಡಿ ಹೋಗಿರುತ್ತಾನೆ ಎಂದರೆ ಸರಿಯಲ್ಲ. ನಂತರ ನಾವು ಸ್ಥಳಕ್ಕೆ ಹೋಗಿ ನೋಡಿದಾಗ 180 ಎಂಎಲ್ ನ 6 ಓಲ್ಡ್ ಟವರ್ ವಿಸ್ಕಿ ಹಾಗೂ 42 ಯುವರ್ ಚಾಯ್ಸ್ ಎಂಬ ಟೆಟ್ರಾ ಪ್ಯಾಕ್ ಗಳು ಇದ್ದವು ಎಂದರೆ ಸರಿಯಲ್ಲ. ಆ ಪೈಕಿ ಮು.ಮಾ-1 ರಿಂದ 36 ನ್ನು ರಸಾಯಿನಿಕ ಪರೀಕ್ಷೆಗೆ ತೆಗೆದರು ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ನಿಪಿ-1 ಮತ್ತು 4 ನ್ನು ಬರೆದು ನಮ್ಮ ಸಹಿ ಪಡೆದುಕೊಂಡರು ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ19.05.2017 ರಂದು ಅಬಕಾರಿ ನೀರೀಕ್ಷಕರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-5 ಎಂದು ಗುರುತಿಸಲಾಯಿತು.

**(ಮರು ವಿಚಾರಣೆ ಇಲ್ಲ)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ.**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ದೇವನಹಳ್ಳಿ.**